P and SC No. 02/2017

RW 03 (ಅಂಬಿಕಾ ಕೆ)

ದಿನಾಂಕಃ 19.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಅರ್ಜಿದಾರರ ಪರ – ಕೆ.ಎನ್.ಈ ವಕೀಲರಿಂದ.**

ನಾನು ಐದನೇ ತರಗತಿ ಓದಿದ್ದು ನನಗೆ ಇಂಗ್ಲಿಷ್ ಓದಲು ಬರುವುದಿಲ್ಲ. ಪ್ರಮಾಣ ಪತ್ರದಲ್ಲಿರುವ ವಿಚಾರಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಯಾವ ಸ್ಥಳ ಹಾಗೂ ದಿನಾಂಕದಂದು ಮದುವೆಯಾಗಿದ್ದೇವೆ ಎಂದು ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ. ಈ ಮದುವೆಯ ಕುರಿತಂತೆ ಮದುವೆ ಆಮಂತ್ರಣ ಪತ್ರ, ಮೃತ ಚನ್ನಬಸಪ್ಪ ಅವರ ಭಾವಚಿತ್ರಗಳನ್ನು ಹಾಜರುಪಡಿಸಿರುವುದಿಲ್ಲ. ನ್ಯಾಯಾಲಯದಲ್ಲಿ ತಹಶೀಲ್ದರ್ ರವರು ನೀಡಿದ ವಂಶವೃಕ್ಷವನ್ನು ಹಾಜರುಪಡಿಸಿರುತ್ತೇನೆ. ನಾನು ತಹಶೀಲ್ದರ್ ರವರು ನೀಡಿದ ವಂಶವೃಕ್ಷವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಕೆ.ಸಿ.ಎಸ್.ಆರ್ ರೂಲ್ಸ್ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ಪ್ರಮಾಣ ಪತ್ರದಲ್ಲಿ ವಕೀಲರು ಬರೆದಿರಬಹುದು. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಕಾನೂನಿನ ಅಂಶಗಳು ವಕೀಲರು ಬರೆದಿರಬಹುದು. ನಾನು ಜೀವಾನಾಂಶ ಅರ್ಜಿಯ ನ್ಯಾಯಾಲಯದ ಆದೇಶವನ್ನು ಹಾಜರುಪಡಿಸಿರುವುದಿಲ್ಲ. ಚನ್ನಬಸಪ್ಪ ಎಂಬ ಹೆಸರಿನವರು ಬಹಳ ಜನ ಇರುತ್ತಾರೆ ಎಂದರೆ ಹೌದು. ನಾನು ಹಾಜರುಪಡಿಸಿರುವ ದಾಖಲಾತಿಗಳು ಈ ಅರ್ಜಿಯಲ್ಲಿರುವ ಚನ್ನಬಸಪ್ಪರವರಿಗೆ ಸಂಬಂದ ಇಲ್ಲ, ಸದರಿ ದಾಖಲಾತಿಗಳಲ್ಲಿ ಚನ್ನಬಸಪ್ಪ ಎಂಬ ಹೆಸರು ಇರುವ ಕಾರಣಕ್ಕೆ ಮಾತ್ರ ಅದನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ಆಧಾರ್ ಕಾರ್ಡ, ರೇಷನ್ ಕಾರ್ಡನ್ನು ನಮ್ಮ ಹೇಳಿಕೆ ಆಧಾರದ ಮೇರೆಗೆ ಅಂಶಗಳನ್ನು ಬರೆಯುತ್ತಾರೆ ಎಂದರೆ ಹೌದು. ಮೃತ ಚನ್ನಬಸಪ್ಪ ಅವರು ಮೃತ ಪಟ್ಟ ನಂತರ ಅವರ ಸರ್ಕಾರಿ ಸೌಲಭ್ಯ ಹಣವನ್ನು ಕೇಳಿರುತ್ತಾರೆ. ಅದರ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ.

ಅರ್ಜಿದಾರರ ಹೆಸರನ್ನು ಮೃತ ಚನ್ನಬಸಪ್ಪ ಅವರು ಕೆಲಸಕ್ಕೆ ಸೇರಿದಾಗ ವಾರಸುದಾರರ ಹೆಸರನ್ನು ಬರೆಸಿರುತ್ತಾರೆ. ಮೃತ ಚನ್ನಬಸಪ್ಪ ಅವರ ಸೇವಾ ಪುಸ್ತಕದಲ್ಲಿ ಮದುವೆಯಾಗಿಲ್ಲ ಎಂದು ಬರೆಸಿದ್ದಾರೆ ಎಂದರೆ ಕೆಲಸಕ್ಕೆ ಸೇರಿದಾಗ ಅವರಿಗೆ ಮದುವೆಯಾಗಿರಲಿಲ್ಲ. ಮೃತ ಚನ್ನಬಸಪ್ಪ ಕೊಟ್ಟೂರಿನ ಜಿಲ್ಲಾ ಆಸ್ಪತ್ರೆಯಲ್ಲಿ ಮೃತ ಪಟ್ಟಿರುತ್ತಾರೆ ಆಗ ನಾನು ಹೋಗಿದ್ದು ಅರ್ಜಿದಾರರು ನನ್ನನ್ನು ಒಳಗೆ ಬಿಟ್ಟುಕೊಳ್ಳಲಿಲ್ಲ. ನಾನು ಆಸ್ಪತ್ರೆಗೆ ಹೋಗೆ ಇರಲಿಲ್ಲ, ಮೃತ ಚನ್ನಬಸಪ್ಪರವರಿಗೆ ಅವರ ಅಕ್ಕನಾದ ಈರಮ್ಮನ ಮಗ ಚಿಕಿತ್ಸೆ ಕೊಡಿಸಿರುತ್ತಾರೆ ಎಂದರೆ ಅವರು ನನ್ನನ್ನು ಒಳಗೆ ಬಿಟ್ಟುಕೊಳ್ಳಲಿಲ್ಲ. ಅವರು ಮೃತ ಪಟ್ಟ ನಂತರ ಮರಣೋತ್ತರ ಕಾರ್ಯಕ್ರಮಗಳನ್ನು ಅರ್ಜಿದಾರರೆ ಮಾಡಿರುತ್ತಾರೆ ಎಂದರೆ ಅವರು ನನ್ನನ್ನು ಒಳಗೆ ಬಿಟ್ಟುಕೊಳ್ಳಲಿಲ್ಲ.

ಮದುವೆಯ ನೊಂದಾಣಿ ಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಇಲ್ಲ. ತಹಶೀಲ್ದರ್ ರವರು ನೀಡಿದ ವಾರಸುದಾರರ ದೃಢೀಕೃತ ಪತ್ರವನ್ನು ಪ್ರಶ್ನಿಸಿರುವುದಿಲ್ಲ. ನಾನು ಮೃತ ಚನ್ನಬಸಪ್ಪ ಅವರ ಪತ್ನಿ ಅಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ, ಮೃತ ಚನ್ನಬಸಪ್ಪರವರ ಹಣ ಪಡೆಯಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರೇ ಮೃತ ಚನ್ನಬಸಪ್ಪ ಅವರ ವಾರಸುದಾರರ ಅಂದರೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಮುಕ್ತಾಯ.**

P and SC No. 02/2017
RW 03 (ಅಂಬಿಕಾ ಕೆ)

**<u>ಎದುರುದಾರರು 1 ಮತ್ತು 4 ರವರ ಪರವಾಗಿ ಸರ್ಕಾರಿ ವಕೀಲರಿಂದ</u>**

ಅರ್ಜಿಯಲ್ಲಿ ಯಾರನ್ನು ಎದುರುದಾರರನ್ನಾಗಿ ಮಾಡಿದ್ದಾರೆ ಎಂದು ನನಗೆ ಅಷ್ಟು ಗೊತ್ತಿಲ್ಲ. ನಾನು ಮದುವೆಯಾಗಿದೆ ಎಂದು ತೋರಿಸಲು ಯಾವುದೇ ಪ್ರಾಧಿಕಾರದಿಂದ ಪಡೆದ ಪತ್ರವನ್ನು ನಾನು ಹಾಜರುಪಡಿಸಿರುವುದಿಲ್ಲ. ನಾನು ಮತ್ತು ನನ್ನ ಮಗ ಮೃತ ಚನ್ನಬಸಪ್ಪರವರ ವಾರಸುದಾರರ ಎಂದು ಕೋರಿ ವಾಣಿಜ್ಯ ತೆರಿಗೆ ಇಲಾಖೆಗೆ ಅರ್ಜಿಯನ್ನು ಸಲ್ಲಿಸಿದ್ದು ಅ ಬಗ್ಗೆ ಸೇವಾ ಪುಸ್ತಕದಲ್ಲಿ ಇಲ್ಲ ಅದ ಕಾರಣ ಈ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಲು ಹೇಳಿರುತ್ತಾರೆ.

ನಾನು ಹಾಜರುಪಡಿಸಿರುವ ಆಧಾರ್ ಕಾರ್ಡ ನಲ್ಲಿ ನನ್ನ ತಂದೆ-ತಾಯಿಯ ಹೆಸರು ಇದೆ. ಮೃತ ಚನ್ನಬಸಪ್ಪ ರವರ ಅಂತ್ಯಕ್ರಿಯೆಗೆ ನಾನು ಹೋಗಿದ್ದೆ. ಆಸ್ಪತ್ರೆಗೆ ದಾಖಲಾದಾಗ ನಾನು ದಾಖಲಾತಿ ಪತ್ರಕ್ಕೆ ನಾನು ಸಹಿ ಹಾಕಿರುವುದಿಲ್ಲ ಏಕೆಂದರೆ ಅರ್ಜಿದಾರರು ನನ್ನನ್ನು ಆಸ್ಪತ್ರೆ ಒಳಗಡೆ ಬಿಟ್ಟುಕೊಂಡಿರುವುದಿಲ್ಲ.

ನಾನು ಸಲ್ಲಿಸಿರುವ ದಾಖಲಾತಿಗಳಲ್ಲಿ ನನ್ನ ಗಂಡನ ವಿಳಾಸ ಇಲ್ಲ ಎಂದರೆ ಹೌದು, ಸಾಕ್ಷಿ ಮುಂದುವರೆದು ಅರ್ಜಿದಾರರು ಕೊಟ್ಟೂರಿನಲ್ಲಿ ನನಗೆ ಆಧಾರ್ ಕಾರ್ಡ ಮಾಡಿಸಿಕೊಳ್ಳಲು ಬಿಡಲಿಲ್ಲ. ನನಗೂ ಮತ್ತು ಮೃತ ಚೆನ್ನಬಸಪ್ಪರವರಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಮಗನನ್ನು ಈ ಅರ್ಜಿಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ.

ಮೃತ ಚೆನ್ನಬಸಪ್ಪರವರ ಹಣವನ್ನು ಪಡೆಯಲು ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ವಂಶವೃಕ್ಷ ಕೊಟ್ಟೂರಿನಲ್ಲಿ ತೆಗೆದುಕೊಂಡಿರುವುದಿಲ್ಲ ಬದಲಿಗೆ ಇಟ್ಟಿಗಿನಲ್ಲಿ ಪಡೆದಿರುತ್ತೆನೆ. ಅದರಲ್ಲಿ ಮೃತ ಚೆನ್ನಬಸಪ್ಪರವರ ವಿಳಾಸವಾಗಲೀ ಹಾಗೂ ಯಾವುದೇ ವಿಳಾಸ ಇಲ್ಲ ಎಂದರೆ ಸರಿಯಲ್ಲ. ನಾನು ಮೃತ ಚೆನ್ನಬಸಪ್ಪರವರು ನಿಧನರಾದ ನಂತರ ವಂಶವೃಕ್ಷವನ್ನು ಪಡೆದಿರುತ್ತೇನೆ. ನಾನು ಮೃತ ಚೆನ್ನಬಸಪ್ಪರವರ ಪತ್ನಿ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)**

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**
**ಕೂಡ್ಲಿಗಿ.**